## 3454 – E02 – VSC – F – 21

FIFTH SEMESTER B.COM. (REVISED) DEGREE EXAMINATION, MARCH 2021

**INCOME TAX LAW AND PRACTICE – I (Paper – I)**

Time : 3 Hours] [Max. Marks : 80

**Instructions** : *1) Answer **all** the questions with strict observation of the inner choice in each Section.*

*2) Use of simple calculator is **allowed**.*

*3) Question No. **13** case study is **compulsory**.*

*4) Give working notes **wherever** necessary.*

SECTION – A **(10×2=20)**

1. Answer **any ten** questions of the following :

a) What is Direct Tax ?

b) What is Assessment ?

c) Who is "ordinarily resident" individual in India ?

d) Who is specified employee ?

e) What do you mean by perquisites ?

f) State the provisions of Income Tax Act relating to employers contribution to URPF and interest credited to URPF.

g) Expand the following :

i) CBDT ii) TDS

h) What is Recognised Provident Fund ?

i) What is municipal value ?

j) How do you treat "Unrealised rent" in computing income from house property ?

k) State any four expenses which are disallowed in computing income from business.

l) State any two professional receipts of a medical practitioner.

**[P.T.O.**

## SECTION – B

(3×5=15)

Answer **any three** of the following questions :

2. Mr. Arun Employed in a company received Rs. 5,40,000 gratuity covered under the Payment of Gratuity Act 1972. He retired on 30-11-2019 after serving for 35 years and 4 months. At the time of retirement his monthly salary consisted of Rs. 13,260. Find out his exempted and taxable gratuity.

3. Smt. Kamala a resident of Bangalore went to Bangladesh for the first time on 1-8-2018. She came back to India on 1-1-2019 and left to Japan on 15-9-2019. She returned to Bangalore on 1-1-2020. Determine her residential status for the previous year 2019-2020.

4. Find out the exempted house rent allowance U/S 10(13A) in the following cases.

| **Particulars** | **Vidya Hyderabad** | **Avinash Delhi** |
|---|---|---|
| Basic salary p.m. | 15,000 | 20,000 |
| Dearness allowance p.m. | 5,000 | 10,000 |
| HRA received (p.m.) | 3,000 | 5,000 |
| Actual rent paid (p.m.) | 2,500 | 4,500 |

5. Mr. Ravi is an employee of Karnataka Traders Bijapur. He furnishes the following information of his salary for the previous year ending 31-3-2020.

   a) Salary Rs. 15,000 p.m.

   b) Bonus equal to 2 months salary.

   c) Tour allowance Rs. 1,000 p.m. (for office duties)

   d) Commission equal to 4 months salary.

   e) Entertainment allowance Rs. 1,000 p.m.

   f) Education allowance of his two children Rs. 100 p.m. each child.

Compute his gross salary Income for the assessment year 2020-21.

6. From the following particulars compute the income from house property for the Assessment Year 2020-2021.

| Particulars | House – I Rs. | House – II Rs. |
|---|---|---|
| a) Municipal value per year | 1,00,000 | 1,20,000 |
| b) Fair rental value per year | 1,20,000 | 1,50,000 |
| c) Standard rent per year | – | 1,80,000 |
| d) Rent receivable per year | – | 2,40,000 |
| e) Nature of occupation | SOP | LOP |
| f) Municipal taxes | 10,000 | 12,000 |
| g) Repairs expenses | 15,000 | 10,000 |

7. From the following Receipts and Payments Account, compute income from profession for A.Y 2020-21.

| Receipts | Rs. | Payments | Rs. |
|---|---|---|---|
| Balance b/d | 10,000 | Staff salary | 50,000 |
| Consultation fees | 1,25,000 | Rent of clinic | 30,000 |
| Visiting fees | 50,000 | Telephone bills | 5,000 |
| Lab fees | 10,000 | Drawings | 80,000 |
| Dividend | 10,000 | Donations | 20,000 |
| | | Balance c/d | 20,000 |
| | **2,05,000** | | **2,05,000** |

SECTION – C **(3×15=45)**

Answer **any three** of the following. Question No. **13** is **compulsory**.

8. The following are the taxable incomes of Sri Krishna for the previous year 2019-2020:

a) Income from salary received in India for the service rendered in Germany Rs. 2,00,000.

b) Interest on South Africa Development Bonds (50% received in India) Rs. 1,40,000.

c) Income from agriculture in Japan Rs. 80,000.

d) Profits from business in Davangere Rs. 5,00,000, the business being controlled from France.

e) Income from house property in Mysore received in London Rs. 1,50,000.

f) Profits from business in Srilanka, the business being controlled from Pakistan Rs. 3,00,000.

g) Dividend from TATA Ltd. Rs. 50,000.

h) Income from business in America, the business is controlled and managed from Bengaluru Rs. 3,00,000.

i) Past untaxed foreign income brought to India during the previous year Rs. 3,00,000.

j) Profit on sale of a building in Mumbai, received in Canada Rs. 3,00,000.

k) Interest received from Mr. X, a non-resident, on the loan provided to him for a business carried on in India Rs. 50,000.

Compute the gross total income for the Assessment year 2020-2021 if he is

i) Ordinarily resident

ii) Not ordinarily resident

iii) Non-resident in India.

9. From the following detailed of income furnished by Mr. Maruti for the previous year ending 31-3-2020. Compute his income from salary for the Assessment Year 2020-2021.

1) Net basic salary (after deducting Income Tax Rs. 20,000) Rs. 2,20,000.

2) Dearness allowance Rs. 60,000 (25% includes for retirement benefits)

3) Bonus Rs. 20,000 p.a.

4) Education allowance Rs. 8,400 (his two children are studying)

5) Entertainment allowance Rs. 12,000.

6) His own contribution to recognised provident fund Rs. 40,000.

7) Employers contribution to above fund Rs. 40,400.

8) Interest credited to the above fund 12% Rs. 12,000.

9) He is provided with rent free accommodation owned by the employer in a city having a population of 12 lakh.

10) Employer has also provided.
   i) Sweeper salary paid to him Rs. 300 p.m.
   ii) Domestic servant, salary paid to him Rs. 250 p.m.

10. From the following particulars furnished by Mr. Ram, compute his income from house property for the A.Y. 2020-2021.

| Sl. | Particulars | House – I (Let-out) | House – II (Let-out) | House – III (SOP) |
|---|---|---|---|---|
| 1) | Municipal value | 50,000 | 40,000 | 30,000 |
| 2) | Actual rent | 48,000 | 60,000 | – |
| 3) | Unrealised rent | 4,000 | – | – |
| 4) | Rent for the vacant period | 8,000 | – | – |
| 5) | Municipal tax paid | 5,000 | 4,000 | 3,000 |
| 6) | Interest on loan taken for construction | 6,000 | 3,000 | 5,000 |
| 7) | Repairs | 12,000 | 6,000 | 5,000 |
| 8) | Insurance | 1,000 | 500 | 400 |

Municipal taxes in respect of House – II were paid by the tenant.

11. From the following Profit and Loss A/c of a merchant for the year ending 31-3-2020 and the given additional information compute his income from business for the Assessment Year 2020-2021.

| | | | |
|---|---|---|---|
| To Salaries to staff | 26,000 | By Gross profit | 75,000 |
| To Interest on capital | 3,000 | By Profit on sale of car | 20,000 |
| To General expenses | 7,000 | By Recovery of bad debt | 5,000 |
| To Bad debts | 1,000 | By Interest on govt. securities | 3,500 |
| To Advertisement | 3,700 | | |

| | | | |
|---|---|---|---|
| To Insurance premium (fire) | 1,000 | By Dividends | 4,000 |
| To Depreciation | 5,500 | By Gifts on birthday | 8,700 |
| To Reserve for bad debts | 2,000 | | |
| To Income tax | 7,000 | | |
| To Donations | 2,000 | | |
| To Car expenses | 2,500 | | |
| To Net profit | 55,500 | | |
| | **1,16,200** | | **1,16,200** |

**Additional information :**

1) Salaries include Rs. 12,000 being salary to proprietor.
2) General expenses include Rs. 2,500 compensation paid to an accountant who had to be removed from service in the interest of the business.
3) Depreciation allowable as per IT rules Rs. 4,000.
4) Of the recovery of bad debts the assessing officer had disallowed Rs. 3,000 in the earlier years.

12. From the following particulars of Assessee for the previous year ending 31-3-2020, calculate the total depreciation for the Assessment Year 2020-21 and indicate the WDV as on 31-3-2020.

| Particulars | W.D.V. on 1-4-2019 | Rates of Depreciation |
|---|---|---|
| 1) First block of assets | 8,00,000 | 10% |
| Building A | | |
| Building B | | |
| 2) Second block of assets | 5,00,000 | 15% |
| Plant M | | |
| PLant N | | |
| 3) Third block of assets | 1,00,000 | 10% |
| Furniture | | |

On 1-12-2019 a new building "C" belonging to the first block of assets was purchased for Rs. 2,00,000 and old building "A" was sold for Rs. 5,00,000.

A new plant "Z" belonging to the second block of assets was also purchased for Rs. 1,00,000 on 1-1-2020. In addition, furniture of third block of assets was acquired on 1-2-2020 Rs. 40,000.

**Compulsory : Case Study**

13. Mr. Kumar a resident of Belagavi furnishes the following particulars of his income for the Assessment Year 2020-21.

| | | |
|---|---|---|
| a) | Income from agricultural land situated in Srilanka | 1,60,000 |
| b) | Income from business established in USA received in India | 1,25,000 |
| c) | Dividend from domestic company | 80,000 |
| d) | Income from business in Srilanka controlled from India (1/4th received in India) | 4,00,000 |
| e) | Income earned and also received in Japan from a bank deposited there | 1,50,000 |
| f) | Income from house property in Bangladesh deposited in a bank there | 60,000 |
| g) | Past untaxed foreign income brought into India during the previous year | 20,000 |
| h) | Salary received in India | 30,000 |

Compute his gross total income for the Assessment Year 2020-2021 if he is a resident in India, not ordinarily resident in India and non resident in India.

Case study question :

a) Is there any difference in the GIT ?

b) If yes, give reasons.

## ಕನ್ನಡ ಆವೃತ್ತಿ

**ಸೂಚನೆಗಳು :** 1) ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವಾಗ ಪ್ರತಿ ವಿಭಾಗದಲ್ಲೂ ಆಂತರಿಕ ಆಯ್ಕೆಯನ್ನು ಸರಿಯಾಗಿ ನೋಡಿರಿ.
2) ಸಾಮಾನ್ಯ ಕ್ಯಾಲ್ಕ್ಯುಲೇಟರ್ ಉಪಯೋಗಿಸಬಹುದು.
3) ಪ್ರಶ್ನೆ **13** ಪ್ರಕರಣ ಅಧ್ಯಯನ ಕಡ್ಡಾಯವಾಗಿದೆ.
4) ಅವಶ್ಯವಿದ್ದೆಡೆ ಕಾರ್ಯ ಟಿಪ್ಪಣಿ ಬರೆಯಿರಿ.

### ವಿಭಾಗ – ಅ

ಈ ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಉತ್ತರಿಸಿರಿ. **(10×2=20)**

1. a) ನೇರ ತೆರಿಗೆ ಎಂದರೇನು ?

b) ಕರಾಕರಣೆ ಎಂದರೇನು ?

c) ಭಾರತದಲ್ಲಿ ''ಸಾಮಾನ್ಯ ನಿವಾಸಿ'' ವ್ಯಕ್ತಿಗಳು ಎಂದರೆ ಯಾರು ?

d) ನಿರ್ದಿಷ್ಟಪಡಿಸಿದ ನೌಕರ ಎಂದರೆ ಯಾರು ?

e) ಸೌಲಭ್ಯಗಳು ಎಂದರೇನು ?

f) ಉದ್ಯೋಗದಾತರು ತಮ್ಮ ಉದ್ಯೋಗಿಗಳ ಅನುಮೋದಿಸಲ್ಪಡದ ಭವಿಷ್ಯನಿಧಿಗಳಲ್ಲಿ ತೊಡಗಿಸುವ ಹಣ ಹಾಗೂ ಆ ಭವಿಷ್ಯ ನಿಧಿಗೆ ಜಮೆಯಾಗುವ ಬಡ್ಡಿಗಳಿಗೆ ಆದಾಯ ತೆರಿಗೆ ಕಾಯ್ದೆಯಲ್ಲಿರುವ ನಿಯಮಾವಳಿಗಳನ್ನು ಹೇಳಿ.

g) ಕೆಳಗಿನವುಗಳನ್ನು ವಿಸ್ತರಿಸಿರಿ :
i) CBDT ii) TDS

h) ಅಂಗೀಕೃತ ಭವಿಷ್ಯ ನಿಧಿ ಎಂದರೇನು ?

i) ನಗರಸಭೆ ಮೌಲ್ಯ ಎಂದರೇನು ?

j) ಮನೆ ಆಸ್ತಿಯಿಂದ ಬಂದ ಆದಾಯವನ್ನು ಲೆಕ್ಕ ಹಾಕುವಾಗ ''ಬಾರದಿರುವ ಬಾಡಿಗೆಯನ್ನು'' ಹೇಗೆ ಪರಿಗಣಿಸುವಿರಿ ?

k) ವ್ಯಾಪಾರದಿಂದ ಬಂದ ಆದಾಯವನ್ನು ಲೆಕ್ಕ ಹಾಕುವಾಗ ತಿರಸ್ಕರಿಸಲ್ಪಡುವ ಯಾವುದಾದರೂ ನಾಲ್ಕು ಖರ್ಚುಗಳನ್ನು ಹೇಳಿರಿ.

l) ವೈದ್ಯಕೀಯ ವೃತ್ತಿ ನಿರತರಿಗೆ ಸಂಬಂಧಿಸಿದಂತೆ ಯಾವುದಾದರೂ ಎರಡು ವೃತ್ತಿ ಸ್ವೀಕೃತಿಗಳನ್ನು ಹೇಳಿರಿ.

## ವಿಭಾಗ – ಬ

ಈ ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

2. ಮಿ. ಅರುಣನು ಒಂದು ಕಂಪನಿಯಲ್ಲಿ ಸೇವೆ ಸಲ್ಲಿಸಿ ರೂ. 5,40,000/- ಗೌರವ ಧನವನ್ನು, ಗೌರವ ಧನ ಕಾನೂನು 1972 ರ ಅನುಸಾರವಾಗಿ ಪಡೆದಿರುತ್ತಾನೆ. ಅವನು 35 ವರ್ಷ 4 ತಿಂಗಳು ಸೇವೆ ಸಲ್ಲಿಸಿ ದಿನಾಂಕ 30-11-2019 ರಂದು ಸೇವೆಯಿಂದ ನಿವೃತ್ತನಾಗಿರುತ್ತಾನೆ. ನಿವೃತ್ತನಾಗುವ ಸಂದರ್ಭದ ಪ್ರತಿ ತಿಂಗಳ ಸಂಬಳವಾಗಿ ರೂ. 13,260/- ಪಡೆಯುತ್ತಿದ್ದಾನೆ.

   ಅವನು ಪಡೆದ ಗೌರವ ಧನದಲ್ಲಿ, ಅವನಿಗೆ ಸಿಗಬಹುದಾದ ತೆರಿಗೆ ವಿನಾಯಿತಿ ಮೊತ್ತ ಮತ್ತು ತೆರಿಗೆಗೆ ಒಳಪಡುವ ಮೊತ್ತವನ್ನು ಕಂಡುಹಿಡಿಯಿರಿ.

3. ಶ್ರೀಮತಿ ಕಮಲಾ ಇವಳೊಬ್ಬ ಬೆಂಗಳೂರಿನ ನಿವಾಸಿಯಾಗಿದ್ದು , ಪ್ರಥಮ ಬಾರಿಗೆ ದಿನಾಂಕ 01-08-2018 ರಂದು ಬಾಂಗ್ಲಾ ದೇಶಕ್ಕೆ ತೆರಳುತ್ತಾಳೆ. ದಿನಾಂಕ 01-01-2019 ರಂದು ಬಾಂಗ್ಲಾದೇಶದಿಂದ ಭಾರತಕ್ಕೆ ಮರಳಿ ಬರುತ್ತಾಳೆ. ಮತ್ತೆ ಅವಳು ಜಪಾನ ದೇಶಕ್ಕೆ ದಿನಾಂಕ 15-09-2019 ರಂದು ಹೋಗುತ್ತಾಳೆ ಮತ್ತು ದಿನಾಂಕ 01-01-2020 ರಂದು ಪುನಃ ಬೆಂಗಳೂರಿಗೆ ಹಿಂದಿರುಗುತ್ತಾಳೆ.

   ಹಾಗಾದರೆ ಹಣಕಾಸು ವರ್ಷ 2019 – 2020 ಕ್ಕೆ ಇವಳ ನಿವಾಸದ ಸ್ಥಾನಮಾನವನ್ನು ಕಂಡುಹಿಡಿಯಿರಿ.

4. ಈ ಕೆಳಗೆ ಒದಗಿಸಿರುವ ಮಾಹಿತಿಗಳಿಂದ, ತೆರಿಗೆಯಿಂದ ವಿನಾಯಿತಿ ಆಗಬಹುದಾದ ಮನೆ ಬಾಡಿಗೆ ಭತ್ಯೆಯನ್ನು ಆದಾಯ ತೆರಿಗೆ ಕಾನೂನು ಪರಿಚ್ಛೇದ 10 (13A) ಯ ಪ್ರಕಾರ ಕಂಡುಹಿಡಿಯಿರಿ.

| ವಿವರಗಳು | ಹೈದರಾಬಾದಿನ ವಿದ್ಯಾ | ದೆಹಲಿಯ ಅವಿನಾಶ |
|---|---|---|
| ಪ್ರತಿ ತಿಂಗಳ ಮೂಲ ವೇತನ | 15,000 | 20,000 |
| ಪ್ರತಿ ತಿಂಗಳ ತುಟ್ಟಿ ಭತ್ಯೆ | 5,000 | 10,000 |
| ಪಡೆದ ಪ್ರತಿ ತಿಂಗಳ ಮನೆ ಬಾಡಿಗೆ ಭತ್ಯೆ | 3,000 | 5,000 |
| ಪ್ರತಿ ತಿಂಗಳು ನಿಖರವಾಗಿ ಕೊಟ್ಟ ಬಾಡಿಗೆ | 2,500 | 4,500 |

5. ಮಿ. ರವಿಯು ಬಿಜಾಪುರದ ಕರ್ನಾಟಕ ಟ್ರೇಡರ್ಸ್‌ನಲ್ಲಿ ನೌಕರನಾಗಿ ಕೆಲಸ ನಿರ್ವಹಿಸುತ್ತಿದ್ದಾನೆ. ಅವನು ಹಿಂದಿನ ವರ್ಷದ ಅಂತ್ಯ 31-3-2020 ರ ವರೆಗೆ ಪಡೆದ ಸಂಬಳದ ವಿವರಗಳನ್ನು ಕೊಡಮಾಡಿದ್ದಾನೆ.

   a) ಸಂಬಳ ರೂ. 15,000 ಪ್ರತಿ ತಿಂಗಳಿಗೆ.

   b) ಬೋನಸ್ ಎರಡು ತಿಂಗಳಿನ ಮೂಲ ಸಂಬಳಕ್ಕೆ ಸಮನಾಗಿ.

c) ಪ್ರವಾಸಿ ಭತ್ಯೆ ರೂ. 1,000 ಪ್ರತಿ ತಿಂಗಳಿಗೆ (ಕಛೇರಿ ಉದ್ದೇಶಕ್ಕಾಗಿ).

d) ಕಮಿಷನ್ ನಾಲ್ಕು ತಿಂಗಳಿನ ಸಂಬಳಕ್ಕೆ ಸಮನಾಗಿ.

e) ಮನರಂಜನಾ ಭತ್ಯೆ ರೂ. 1,000 ಪ್ರತಿ ತಿಂಗಳಿಗೆ.

f) ಶಿಕ್ಷಣ ಭತ್ಯೆ ಅವನ ಎರಡು ಮಕ್ಕಳಿಗೆ ಪ್ರತಿ ತಿಂಗಳು ರೂ. 100 ರಂತೆ ಪ್ರತಿ ಮಗುವಿಗೆ.

ಕರಾಕರಣೆ ವರ್ಷ 2020-21 ರ ಸಾಲಿನ ಅವರ ಒಟ್ಟು ಸಂಬಳದ ಆದಾಯವನ್ನು ಕಂಡುಹಿಡಿಯಿರಿ.

6. ಈ ಕೆಳಗಿನ ಮಾಹಿತಿಗಳನ್ನು ಅನುಸರಿಸಿ, ಕರಾಕರಣೆ ವರ್ಷ 2020-2021 ಕ್ಕೆ ಮನೆ ಬಾಡಿಗೆ ಆದಾಯವನ್ನು ಕಂಡು ಹಿಡಿಯಿರಿ.

| ವಿವರಗಳು | ಮನೆ – I<br>ರೂ. | ಮನೆ – II<br>ರೂ. |
|---|---|---|
| a) ವಾರ್ಷಿಕ ನಗರಸಭೆ ಮೌಲ್ಯ | 1,00,000 | 1,20,000 |
| b) ವಾರ್ಷಿಕ ನೈಜ ಬಾಡಿಗೆ ಮೌಲ್ಯ | 1,20,000 | 1,50,000 |
| c) ವಾರ್ಷಿಕ ಅಂಗೀಕೃತ ಬಾಡಿಗೆ | – | 1,80,000 |
| d) ವಾರ್ಷಿಕ ಪಡೆಯಬಹುದಾದ ಬಾಡಿಗೆ | – | 2,40,000 |
| e) ಮನೆ ಬಳಕೆ | ಸ್ವಂತ | ಬಾಡಿಗೆ |
| f) ನಗರಸಭೆ ತೆರಿಗೆ ಕಟ್ಟಿದ್ದು | 10,000 | 12,000 |
| g) ದುರಸ್ತಿ ಖರ್ಚು | 15,000 | 10,000 |

7. ಈ ಕೆಳಗಿನ ಸ್ವೀಕೃತಿ ಮತ್ತು ಸಂದಾಯ ಖಾತೆಯನ್ನು ಆಧರಿಸಿ, ಕರಾಕರಣೆ ವರ್ಷ 2020-21ಕ್ಕೆ ಸಂಬಂಧಿಸಿ ವೃತ್ತಿ ಆದಾಯವನ್ನು ಕಂಡು ಹಿಡಿಯಿರಿ.

| ಸ್ವೀಕೃತಿ | ಮೊತ್ತ ರೂ. ಗಳಲ್ಲಿ | ಸಂದಾಯ | ಮೊತ್ತ ರೂ. ಗಳಲ್ಲಿ |
|---|---|---|---|
| ಪ್ರಾರಂಭದ ಶಿಲ್ಕು | 10,000 | ಸಿಬ್ಬಂದಿ ಸಂಬಳ | 50,000 |
| ಸಲಹಾ ಶುಲ್ಕ | 1,25,000 | ಆಸ್ಪತ್ರೆ ಬಾಡಿಗೆ | 30,000 |
| ಭೇಟಿ ಶುಲ್ಕ | 50,000 | ದೂರ ಸಂಪರ್ಕ ಖರ್ಚು | 5,000 |
| ತಪಾಸಣಾ ಶುಲ್ಕ (ಲ್ಯಾಬ್) | 10,000 | ಸ್ವಂತಕ್ಕೆ ಪಡೆದದ್ದು | 80,000 |
| ಲಾಭಾಂಶ | 10,000 | ದೇಣಿಗೆಗಳು | 20,000 |
| | | ಅಂತಿಮ ಶಿಲ್ಕು | 20,000 |
| | **2,05,000** | | **2,05,000** |

**ವಿಭಾಗ – ಕ** **(3×15=45)**

ಈ ಕೆಳಗಿನ ಯಾವುದಾದರೂ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ. ಪ್ರಶ್ನೆ ಸಂಖ್ಯೆ **13** ಕಡ್ಡಾಯವಾಗಿರುತ್ತದೆ.

8. ಶ್ರೀ ಕೃಷ್ಣ ಇವರು ಹಣಕಾಸು ವರ್ಷ 2019-2020 ರ ತೆರಿಗೆಗೆ ಒಳಪಡುವ ತಮ್ಮ ಆದಾಯದ ವಿವರಗಳನ್ನು ಈ ಕೆಳಗಿನಂತೆ ನೀಡಿರುತ್ತಾರೆ.

a) ಜರ್ಮನಿಯಲ್ಲಿ ಸೇವೆ ಸಲ್ಲಿಸಿದ್ದಕ್ಕಾಗಿ ಭಾರತದಲ್ಲಿ ಪಡೆದ ವೇತನದ ಆದಾಯ ರೂ. 2,00,000.

b) ದಕ್ಷಿಣ ಆಫ್ರಿಕಾ ಅಭಿವೃದ್ಧಿ ಭದ್ರತಾ ಪತ್ರಗಳ ಮೇಲಿನ ಬಡ್ಡಿ ರೂ. 1,40,000 (ಶೇಕಡಾ 50 ರಷ್ಟು ಭಾರತದಲ್ಲಿ ಪಡೆಯಲಾಗಿದೆ ).

c) ಜಪಾನ್‌ನಲ್ಲಿಯ ಕೃಷಿಯಿಂದ ಬಂದ ಆದಾಯ ರೂ. 80,000.

d) ದಾವಣಗೆರೆಯಲ್ಲಿನ ವ್ಯಾಪಾರದಿಂದ ಬಂದ ಲಾಭ ರೂ. 5,00,000 ಈ ವ್ಯಾಪಾರವು ಫ್ರಾನ್ಸ್‌ನಿಂದ ನಿಯಂತ್ರಿಸಲಾಗುತ್ತದೆ.

e) ಮೈಸೂರಿನಲ್ಲಿರುವ ಮನೆ ಆಸ್ತಿಯಿಂದ ಬಂದ ಆದಾಯ, ಲಂಡನ್‌ನಲ್ಲಿ ಪಡೆಯಲಾಗಿದೆ ರೂ. 1,50,000.

f) ಶ್ರೀಲಂಕಾದಲ್ಲಿರುವ ವ್ಯಾಪಾರದಿಂದ ಬಂದ ಲಾಭ ಈ ವ್ಯಾಪಾರವು ಪಾಕಿಸ್ತಾನದಿಂದ ನಿಯಂತ್ರಿಸಲ್ಪಡುತ್ತದೆ ರೂ. 3,00,000.

g) ಟಾಟಾ ನಿಯಮಿತದಿಂದ ಬಂದ ಲಾಭಾಂಶ ರೂ. 50,000.

h) ಬೆಂಗಳೂರಿನಿಂದ ನಿಯಂತ್ರಿಸಲ್ಪಡುವ, ಅಮೇರಿಕಾದಲ್ಲಿನ ವ್ಯಾಪಾರದಿಂದ ಬಂದ ಲಾಭ ರೂ. 3,00,000.

i) ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತಕ್ಕೆ ತರಲಾದ ಹಿಂದಿನ ವರ್ಷದಲ್ಲಿ ಗಳಿಸಿದ ತೆರಿಗೆ ಹಾಕದ ವಿದೇಶೀ ಆದಾಯ ರೂ. 3,00,000.

j) ಮುಂಬೈನಲ್ಲಿರುವ ಕಟ್ಟಡ ಮಾರಾಟದಿಂದ ಬಂದ ಲಾಭವನ್ನು ಕೆನಡಾದಲ್ಲಿ ಪಡೆದಿರುವುದು ರೂ. 3,00,000

k) ಭಾರತದ ವಾಸಿಗಳಲ್ಲದ ಶ್ರೀ X ಅವರು ಭಾರತದಲ್ಲಿರುವ ವ್ಯಾಪಾರಕ್ಕಾಗಿ ಕೊಟ್ಟ ಸಾಲದ ಮೇಲಿನ ಬಡ್ಡಿ ರೂ. 50,000.

ಕರಾಕರಣೆ ವರ್ಷ 2020-2021 ಕ್ಕೆ ಸಮಗ್ರ ಒಟ್ಟು ಆದಾಯವನ್ನು ಲೆಕ್ಕ ಹಾಕಿ, ಒಂದು ವೇಳೆ ಶ್ರೀ ಕೃಷ್ಣಾ ಇವರು

i) ಸಾಮಾನ್ಯವಾಗಿ ಭಾರತದ ನಿವಾಸಿಗಳಾಗಿದ್ದಲ್ಲಿ

ii) ಸಾಮಾನ್ಯವಾಗಿ ಭಾರತದ ವಾಸಿಗಳಲ್ಲದಿದ್ದಲ್ಲಿ

iii) ಭಾರತದ ವಾಸಿಗಳಲ್ಲದಿದ್ದಲ್ಲಿ.

9. ಶ್ರೀ ಮಾರುತಿಯವರು ಹಿಂದಿನ ವರ್ಷಾಂತ್ಯ 31-3-2020 ರವರೆಗೆ ಪಡೆದಿರುವ ಆದಾಯದ ವಿವರಗಳನ್ನು ನೀಡಿರುತ್ತಾರೆ. ಅವರ ಕರಾಕರಣೆ ವರ್ಷ 2020-21 ಕ್ಕೆ ಸಂಬಂಧಿಸಿ ಸಂಬಳದ ಆದಾಯವನ್ನು ಲೆಕ್ಕ ಹಾಕಿರಿ.

1) ನಿವ್ವಳ ಮೂಲ ಸಂಬಳ (ಆದಾಯ ತೆರಿಗೆ ರೂ. 20,000 ಕಡಿತಗೊಳಿಸಿದ ನಂತರ) ರೂ. 2,20,000.

2) ತುಟ್ಟಿಭತ್ಯೆ ರೂ. 60,000 (ಶೇಕಡಾ 25 ರಷ್ಟು ನಿವೃತ್ತಿ ಸೌಲಭ್ಯಕ್ಕೆ ಸೇರಿರುತ್ತದೆ).

3) ಬೋನಸ್ ರೂ. 20,000 ವಾರ್ಷಿಕ.

4) ಮಕ್ಕಳ ಶಿಕ್ಷಣ ಭತ್ಯೆ ರೂ. 8,400 (ಇವರ ಎರಡು ಮಕ್ಕಳು ಅಧ್ಯಯನ ಮಾಡುತ್ತಿದ್ದಾರೆ).

5) ಮನೋರಂಜನಾ ಭತ್ಯೆ ರೂ. 12,000.

6) ಇವನ ವೈಯಕ್ತಿಕ ಹೂಡಿಕೆ ಅಂಗೀಕೃತ ಭವಿಷ್ಯ ನಿಧಿಯಲ್ಲಿ ರೂ. 40,000.

7) ಮೇಲೆ ತಿಳಿಸಿದ ಭವಿಷ್ಯ ನಿಧಿಯಲ್ಲಿ ಉದ್ಯೋಗದಾತರ ಹೂಡಿಕೆ ರೂ. 40,400 ಇರುತ್ತದೆ.

8) ಮೇಲೆ ತಿಳಿಸಿದ ಭವಿಷ್ಯ ನಿಧಿಯಲ್ಲಿ ಶೇಕಡಾ 12 ರಷ್ಟು ಜಮೆಯಾದ ಬಡ್ಡಿ ಹಣ ರೂ. 12,000.

9) ಇವನಿಗೆ ಬಾಡಿಗೆ ರಹಿತ ಮನೆಯನ್ನು ಒದಗಿಸಲಾಗಿದ್ದು, ಸದರಿ ಮನೆಯು ಪಟ್ಟಣದಲ್ಲಿ ಉದ್ಯೋಗದಾತರ ಸ್ವಂತದ್ದಾಗಿರುತ್ತದೆ. ಈ ಪಟ್ಟಣದ ಜನಸಂಖ್ಯೆಯು 12,00,000 ಇರುತ್ತದೆ.

10) ಉದ್ಯೋಗದಾತರು ಈ ಸೌಲಭ್ಯಗಳನ್ನು ಒದಗಿಸಿದ್ದಾರೆ :

i) ಸೇವಕನನ್ನು ನೇಮಿಸಿದ್ದು ಪ್ರತಿ ತಿಂಗಳ ಸಂಬಳ 300/-

ii) ಮನೆ ಸೇವಕನನ್ನು ನೇಮಿಸಿದ್ದು ಪ್ರತಿ ತಿಂಗಳ ಸಂಬಳ 250/-

10. ಮಿ. ರಾಮು ಇವರು ಈ ಕೆಳಗಿನ ಮಾಹಿತಿಗಳನ್ನು ಪೂರೈಸಿದ್ದು, ಕರಾಕರಣೆ ವರ್ಷ 2020-21 ಕ್ಕೆ ಅನುಗುಣವಾಗಿ ಅವನ ಮನೆ ಆಸ್ತಿಯಿಂದ ಬಂದ ಆದಾಯವನ್ನು ಲೆಕ್ಕ ಹಾಕಿ.

| ಅ. ಸ | ವಿವರಗಳು | ಮನೆ – I<br>ಬಾಡಿಗೆಗೆ | ಮನೆ – II<br>ಬಾಡಿಗೆಗೆ | ಮನೆ – III<br>ಸ್ವಂತಕ್ಕೆ |
|---|---|---|---|---|
| 1 | ನಗರಸಭೆ ಮೌಲ್ಯ | 50,000 | 40,000 | 30,000 |
| 2 | ನೈಜ ಬಾಡಿಗೆ | 48,000 | 60,000 | – |

| | | | | |
|---|---|---|---|---|
| 3 | ಬಾರದಿರುವ ಬಾಡಿಗೆ | 4,000 | – | – |
| 4 | ಖಾಲಿ ಇದ್ದ ಅವಧಿ ಬಾಡಿಗೆ | 8,000 | – | – |
| 5 | ನಗರಸಭೆ ತೆರಿಗೆ | 5,000 | 4,000 | 3,000 |
| 6 | ಮನೆ ಕಟ್ಟುವುದಕ್ಕಾಗಿ ಪಡೆದ ಸಾಲದ ಮೇಲಿನ ಬಡ್ಡಿ | 6,000 | 3,000 | 5,000 |
| 7 | ದುರಸ್ತಿ ಖರ್ಚು | 12,000 | 6,000 | 5,000 |
| 8 | ವಿಮಾ ಕಂತು | 1,000 | 500 | 400 |

ಮನೆ – II ಸಂಬಂಧಿಸಿದ ನಗರಸಭೆ ತೆರಿಗೆಯನ್ನು ಬಾಡಿಗೆದಾರರೇ ತುಂಬಿದ್ದಾರೆ.

11. ಈ ಕೆಳಗೆ ಒಬ್ಬ ವ್ಯಾಪಾರಿಯು ವರ್ಷಾಂತ್ಯ 31-3-2020 ಕ್ಕೆ ಕೊನೆಗೊಂಡ ಲಾಭ ಮತ್ತು ನಷ್ಟದ ಖಾತೆಯನ್ನು ಮತ್ತು ಅವನು ಕೊಟ್ಟ ಹೆಚ್ಚುವರಿ ಮಾಹಿತಿಯನ್ನು ಆಧರಿಸಿ, ಕರಾಕರಣೆವರ್ಷ 2020-2021 ರ ಸಾಲಿನ ವ್ಯಾಪಾರದ ಆದಾಯವನ್ನು ಲೆಕ್ಕ ಹಾಕಿರಿ.

| | | | |
|---|---|---|---|
| ಸಿಬ್ಬಂದಿಗೆ ಸಂಬಳ | 26,000 | ಸಮಗ್ರ ಲಾಭ | 75,000 |
| ಬಂಡವಾಳದ ಮೇಲಿನ ಬಡ್ಡಿ | 3,000 | ಕಾರುಗಾಡಿ ಮಾರಾಟದಿಂದ ಆದ ಲಾಭ | 20,000 |
| ಸಾಮಾನ್ಯ ಖರ್ಚು | 7,000 | ಮುಳುಗು ಸಾಲ ಮರು ಪಡೆದದ್ದು | 5,000 |
| ಮುಳುಗು ಸಾಲ | 1,000 | ಸರಕಾರಿ ಭದ್ರತಾ ಪತ್ರಗಳ | |
| ಜಾಹಿರಾತುಗಳು | 3,700 | ಮೇಲಿನ ಬಡ್ಡಿ | 3,500 |
| ಬೆಂಕಿ ವಿಮಾ ಕಂತು | 1,000 | ಪಡೆದ ಲಾಭಾಂಶ | 4,000 |
| ಸವಕಳಿ | 5,500 | ಪಡೆದ ಹುಟ್ಟುಹಬ್ಬದ | |
| ಮುಳುಗು ಸಾಲದ ಮೀಸಲು | 2,000 | ಕಾಣಿಕೆಗಳು | 8,700 |
| ಆದಾಯ ಕರ | 7,000 | | |
| ಕೊಟ್ಟ ದೇಣಿಗೆ | 2,000 | | |
| ವಾಹನ ಖರ್ಚು (ಕಾರು ಗಾಡಿ) | 2,500 | | |
| ನಿವ್ವಳ ಲಾಭ | 55,500 | | |
| | **1,16,200** | | **1,16,200** |

**ಹೆಚ್ಚುವರಿ ಮಾಹಿತಿಗಳು :**

1) ಸಿಬ್ಬಂದಿ ಸಂಬಳದಲ್ಲಿ ರೂ. 12,000 ಸಂಬಳ ಮಾಲೀಕರಿಗೆ ಕೊಟ್ಟಿದ್ದು ಇದೆ.

2) ಸಾಮಾನ್ಯ ಖರ್ಚಿನಲ್ಲಿ ರೂ. 2,500 ಮೊತ್ತ ವ್ಯವಹಾರಿ ಸಂಸ್ಥೆಯ ಲೆಕ್ಕಿಗನಿಗೆ, ಅವನ ಸೇವೆಯನ್ನು ಸಂಸ್ಥೆಯ ಹಿತಕ್ಕಾಗಿ ತೆಗೆದು ಹಾಕಿದ್ದಕ್ಕಾಗಿ ನೀಡಲಾಗಿದೆ.

3) ಆದಾಯ ತೆರಿಗೆ ಕಾನೂನು ಪ್ರಕಾರ ಅನುಮತಿಸಲ್ಪಟ್ಟ ಸವಕಳಿ ರೂ. 4,000.

4) ವಸೂಲಾದ ಬಾರದಿರುವ ಸಾಲದ ಮೊತ್ತ ರೂ. 3,000 ಹಿಂದಿನ ವರ್ಷದಲ್ಲಿ ತೆರಿಗೆ ಅಧಿಕಾರಿಗಳು ಬಾರದಿರುವ ಸಾಲವೆಂದು ಸಾರಿದ್ದು ಇರುತ್ತದೆ.

12. ಒಬ್ಬ ತೆರಿಗೆದಾರ ಕೊಡಮಾಡಿದ ಈ ಕೆಳಗಿನ ಮಾಹಿತಿಗಳನ್ನು ಆಧರಿಸಿ (ವರ್ಷಾಂತ್ಯ 31-3-2020 ರಂತೆ), ಕರಾಕರಣೆ ವರ್ಷ 2020-21 ಕ್ಕೆ ಅನುಮತಿಸುವ ಸವಕಳಿಯನ್ನು ಲೆಕ್ಕ ಹಾಕಿ ಹಾಗೂ 31-3-2020 ರಂದು ಸವಕಳಿ ಮೌಲ್ಯ (W.D.V.) ವನ್ನು ತೋರಿಸಿ.

| ಆಸ್ತಿಗಳ ವಿವರ | W.D.V. 1-4-2019 | ಸವಕಳಿ ದರ |
|---|---|---|
| 1) ಮೊದಲ ಸಮೂಹ ಆಸ್ತಿ | 8,00,000 | 10% |
| ಕಟ್ಟಡ A | | |
| ಕಟ್ಟಡ B | | |
| 2) ದ್ವಿತೀಯ ಸಮೂಹ ಆಸ್ತಿ | 5,00,000 | 15% |
| ಪ್ಲಾಂಟ್ M | | |
| ಪ್ಲಾಂಟ್ N | | |
| 3) ತೃತೀಯ ಸಮೂಹ ಆಸ್ತಿ | 1,00,000 | 10% |
| ಪೀಠೋಪಕರಣಗಳು | | |

ದಿನಾಂಕ 1-12-2019 ರಂದು ಹೊಸ ಕಟ್ಟಡ "C" ಯನ್ನು ರೂ. 2,00,000 ಕ್ಕೆ ಖರೀದಿಸಲಾಗಿದೆ ಮತ್ತು ಅದೇ ಮೊದಲ ಸಮೂಹದ ಹಳೆ ಕಟ್ಟಡ "A" ಯನ್ನು ರೂ. 5,00,000 ಕ್ಕೆ ಮಾರಲಾಗಿದೆ.

ದ್ವಿತೀಯ ಸಮೂಹದ ಆಸ್ತಿಗಳಾದ, ಸ್ಥಾವರ "Z" ನ್ನು ದಿನಾಂಕ 1-1-2020 ರಂದು ರೂ. 1,00,000 ಕ್ಕೆ ಖರೀದಿಸಲಾಗಿದೆ. ಇದರ ಜೊತೆಗೆ ದಿನಾಂಕ 1-2-2020 ರಂದು ತೃತೀಯ ಸಮೂಹದ ಆಸ್ತಿಯಾದ ಪೀಠೋಪಕರಣಗಳನ್ನು ರೂ. 40,000 ಕ್ಕೆ ಖರೀದಿಸಲಾಗಿದೆ.

**ಕಡ್ಡಾಯ ಪ್ರಶ್ನೆ: ಪ್ರಕರಣ ಅಧ್ಯಯನ.**

13. ಮಿ. ಕುಮಾರನು ಬೆಳಗಾವಿಯ ವಾಸಿಯಾಗಿದ್ದು, ಅವನು ಕರಾಕರಣೆ ವರ್ಷ 2020-21 ರ ಆದಾಯದ ವಿವರಗಳನ್ನು ಈ ಕೆಳಗಿನಂತೆ ಒದಗಿಸಿದ್ದಾನೆ.

| | | ರೂ. |
|---|---|---|
| a) | ಶ್ರೀಲಂಕಾದಲ್ಲಿನ ಕೃಷಿಯಿಂದ ಬಂದ ಆದಾಯ | 1,60,000 |
| b) | ಯು.ಎಸ್.ಎ. ಯಲ್ಲಿ ಸ್ಥಾಪಿಸಲ್ಪಟ್ಟ ವ್ಯವಹಾರದಿಂದ ಗಳಿಸಿ, ಭಾರತದಲ್ಲಿ ಸ್ವೀಕರಿಸಿದ್ದು | 1,25,000 |
| c) | ಭಾರತೀಯ ಕಂಪನಿಯ ಲಾಭಾಂಶ | 80,000 |
| d) | ಶ್ರೀಲಂಕಾದಲ್ಲಿಯ ವ್ಯವಹಾರದಿಂದ ಗಳಿಸಿದ ಮತ್ತು ಭಾರತದಿಂದ ನಿಯಂತ್ರಿಸಲ್ಪಟ್ಟ ವ್ಯವಹಾರ ಆದಾಯ ($1/4$ ಪ್ರಮಾಣದ ಆದಾಯ ಭಾರತದಲ್ಲಿ ಸ್ವೀಕರಿಸಿದೆ) | 4,00,000 |
| e) | ಜಪಾನಿನ ಬ್ಯಾಂಕಿನ ಸ್ಥಿರ ಠೇವಣಿಯಿಂದ ಗಳಿಸಿದ ಮತ್ತು ಅಲ್ಲಿಯೇ ಸ್ವೀಕರಿಸಿದ ಆದಾಯ | 1,50,000 |
| f) | ಬಾಂಗ್ಲಾದೇಶದಲ್ಲಿಯ ಮನೆ ಆಸ್ತಿಯಿಂದ ಗಳಿಸಿದ ಆದಾಯ, ಅಲ್ಲಿಯೇ ಬ್ಯಾಂಕಿನ ಠೇವಣಿಯಲ್ಲಿ ಇಡಲಾಗಿದೆ | 60,000 |
| g) | ಹಿಂದೆ ಗಳಿಸಿರುವ ತೆರಿಗೆ ಹಾಕದ ಆದಾಯ, ಈ ಹಣಕಾಸು ವರ್ಷದಲ್ಲಿ ಭಾರತಕ್ಕೆ ತರಲಾಗಿದೆ | 20,000 |
| h) | ಭಾರತ ದೇಶದಲ್ಲಿ ಸ್ವೀಕರಿಸಿದ ಸಂಬಳದ ಆದಾಯ | 30,000 |

ಕರಾಕರಣೆ ವರ್ಷ 2020-2021 ಕ್ಕೆ ಮಿ. ಕುಮಾರನ ಒಟ್ಟು ಆದಾಯವನ್ನು ಕಂಡುಹಿಡಿಯಿರಿ, ಇವರು ಸಾಮಾನ್ಯವಾಗಿ ಭಾರತದ ವಾಸಿಗಳಾಗಿದ್ದಲ್ಲಿ, ಸಾಮಾನ್ಯವಾಗಿ ಭಾರತದ ವಾಸಿಗಳಲ್ಲದಿದ್ದಲ್ಲಿ ಮತ್ತು ಭಾರತದ ವಾಸಿಗಳಲ್ಲದಿದ್ದಲ್ಲಿ.

ಪ್ರಕರಣದ ಅಧ್ಯಯನ ಪ್ರಶ್ನೆ:

a) ಸಮಗ್ರ ಒಟ್ಟು ಆದಾಯದಲ್ಲಿ ವ್ಯತ್ಯಾಸವಿದೆಯೇ ?

b) ವ್ಯತ್ಯಾಸವಿದ್ದಲ್ಲಿ ಕಾರಣಗಳನ್ನು ಕೊಡಿರಿ.